<u>ಓ.ಎಸ್. – 79/2022</u>

ಡಿ. ಡಬ್ಲೂ – 1

<u>ಸಾಕ್ಷಿಯನ್ನು ದಿಃ 04.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಎಂ.ಎಸ್.ಜಿ ರವರಿಂದ</u>**

**1.** ನನ್ನ ಗಂಡನ ಹೆಸರು ಪುಟ್ಟ ಓಬೇಗೌಡ. ನನ್ನ ಮಾವನ ಹೆಸರು ಓಬೇ ಗೌಡ. ನನ್ನ ಅತ್ತೆ ಮತ್ತು ಮಾವ ಮೂಲತಃ ಚನ್ನರಾಯಪಟ್ಟಣದ ಮಡಬ ಗ್ರಾಮದವರು. ಓಬೇ ಗೌಡರಿಗೆ ಅವರ ತಂದೆ ತಾಯಿಯಿಂದ ಯಾವುದೇ ಆಸ್ತಿಗಳು ಬರಲಿಲ್ಲ. ನನ್ನ ಮತ್ತು ವಾದಿಯ ಗಂಡ ಪುಟ್ಟ ಓಬೇ ಗೌಡ ಹಾಗೂ ನಂಜುಂಡರವರು ಹಾಗೂ ಅವರ ಸಹೋದರ–ಸಹೋದರಿಯರು ನಮ್ಮ ಅತ್ತೆ–ಮಾವನವರು ಕಾರ್ಗಲ್ ಗೆ ಬರುವ ಮೊದಲೇ ಜನಿಸಿದರು ಎಂದರೆ ಸರಿ. 1970–80 ನೇ ಸಾಲಿನಲ್ಲಿ ಪ್ರಾಜೆಕ್ಟ್ ವರ್ಕ್ ಪ್ರಾರಂಭವಾದಾಗ ನನ್ನ ಮಾವ ಓಬೇ ಗೌಡರು ಕಾರ್ಗಲ್ ಗೆ ಮದ್ಯ ಮಾರಾಟಕ್ಕಾಗಿ ಬಂದರು ಎಂದರೆ, ಇರಬಹುದು. ಓಬೇ ಗೌಡರ ಮಕ್ಕಳ ಪೈಕಿ 3 ನೇ ಪ್ರತಿವಾದಿಯ ಮದುವೆ ಕಾರ್ಗಲ್ ನಲ್ಲಿ ನಡೆದಿದ್ದು, ಉಳಿದ ಮಕ್ಕಳ ಮದುವೆ ಬೇರೆ ಬೇರೆ ಕಡೆ ನಡೆಯಿತು.

**2.** ನನ್ನ ತವರೂರು ಶಿವಮೊಗ್ಗ. ವಾದಿಯ ತವರೂರು ತಿಪಟೂರಿನ ನೊಣವಿನಕೆರೆ. 1 ನೇ ವಾದಿಗೆ ತಮ್ಮ ತವರು ಮನೆಯಿಂದ ಯಾವುದೇ ಆಸ್ತಿಗಳು ಇಲ್ಲ. ನನಗೂ ಸಹ ನನ್ನ ತವರು ಮನೆಯಿಂದ ಯಾವುದೇ ಆಸ್ತಿಯನ್ನು ಕೊಟ್ಟಿಲ್ಲ. ಆದರೆ ಹಂತ ಹಂತವಾಗಿ ಸುಮಾರು 10–12 ಲಕ್ಷ ರೂ.ಗಳನ್ನು ಕೊಟ್ಟಿದ್ದರು. ವಾದಿಯ ಗಂಡ ಮತ್ತು ನನ್ನ ಗಂಡ ಪ್ರೌಢ ಶಾಲೆಯವರೆಗೆ ಮಾತ್ರ ಓದಿದ್ದರು. ನಂತರ ಅವರು ನನ್ನ ಮಾವನೊಂದಿಗೆ ಮದ್ಯದ ಮಾರಾಟಕ್ಕೆ ಹೋಗಿದ್ದರು. ನನ್ನ ಮತ್ತು ವಾದಿಯ ಗಂಡಂದಿರು ಮದ್ಯದ ವ್ಯಾಪಾರವನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ಗಂಡ ಕಾರ್ಗಲ್ ನಲ್ಲಿ ಹೋಟೇಲ್ ಅನ್ನು ಸಹ ನಡೆಸುತ್ತಿದ್ದೇವೆ ಎನ್ನುತ್ತಾರೆ. ನಾವು ನಡೆಸುತ್ತಿರು ಹೋಟೇಲ್ ನ ಉತ್ತರಕ್ಕೆ ಅರ್ಜುನ್ ಎನ್ನುವವರ ವಾಸದ ಮನೆ ಇದೆ. ಉಳಿದ ದಿಕ್ಕುಗಳಲ್ಲಿ ಏನು ಇದೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಹೋಟೇಲ್ ಕಟ್ಟಡವನ್ನು 2003 ನೇ ಸಾಲಿನಲ್ಲಿ ನಾನು ಮತ್ತು ನನ್ನ ಗಂಡ ಖರೀದಿ ಮಾಡಿದ್ದೇವೆ.

**3.** ನಾನು ಮತ್ತು ನನ್ನ ಗಂಡ ಬ್ಯಾಂಕಿನ ವ್ಯವಹಾರ ಮಾಡುತ್ತಿದ್ದೇವೆ. ಈ ಬಗ್ಗೆ ಪಾಸ್ ಪುಸ್ತಕಗಳು ಸಹ ಇವೆ. ವಾದಿಯ ಗಂಡ ನಂಜುಂಡಪ್ಪನು 1999 ರಲ್ಲಿ ಮೃತ ಪಟ್ಟನು ಎಂದರೆ ಸರಿ. 2022 ರಲ್ಲಿ ನನ್ನ ಗಂಡ ಮೃತ ಪಟ್ಟಿದ್ದಾನೆ ಎಂದರೆ ಸರಿ. ನನ್ನ ಗಂಡ ಮೃತ ಪಡುವವರೆಗೆ ತನ್ನ ತಂದೆಯಿಂದ ಬಂದ ಮದ್ಯದ ವ್ಯಾಪಾರವನ್ನೇ ಮಾಡುತ್ತಿದ್ದರು ಎಂದರೆ ಸರಿ. ನಾವು ನಡೆಸುತ್ತಿರುವ ಮದ್ಯ ಮಾರಾಟದ ಅಂಗಡಿಯ ಪರವಾನಗಿ ಸಿಎಲ್2 ಎಂದರೆ ಸರಿ. ಸದರಿ ಪರವಾನಗಿಯನ್ನು ಮೊದಲು ನನ್ನ ಮಾವ ಓಬೇ ಗೌಡರವರು ಪಡೆದಿದ್ದರು ಎಂದರೆ ಸರಿಯಲ್ಲ. ನನ್ನ ಮಾವನ ಕಾಲದಲ್ಲಿ ಶ್ರೀ ಮಾರುತಿ ವೈನ್ಸ್ ಎಂಬ ಹೆಸರಿನಲ್ಲಿ ಸದರಿ ಸಿಎಲ್2 ನ ಪರವಾನಗಿ ಅಡಿಯಲ್ಲಿ ಮದ್ಯದ ಅಂಗಡಿಯನ್ನು ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಾವ ಮೃತ ಪಟ್ಟ ನಂತರ 1 ನೇ ಪ್ರತಿವಾದಿಯ ಹೆಸರಿಗೆ ಸದರಿ ಪರವಾನಗಿ ವರ್ಗಾವಣೆ ಆಯಿತು ಎಂದರೆ ಸರಿಯಲ್ಲ. ಮುಂದುವರೆದು ಹಣವನ್ನು ಕಟ್ಟಿಲ್ಲ ಎಂಬ ಕಾರಣಕ್ಕಾಗಿ ಸದರಿ ಪರವಾನಗಿ ರದ್ದಾಯಿತು. ಓಬೇ ಗೌಡ ಮತ್ತು ರಮೇಶ್ ಎನ್ನುವವರು ಶರಾವತಿ ವೈನ್ಸ್‌ಸ್ಟೋರ್ ಎಂಬ ಹೆಸರಿನಲ್ಲಿ ಮದ್ಯದ ಅಂಗಡಿಯನ್ನು ನಡೆಸುತ್ತಿದ್ದರು. ನಂತರ ನನ್ನ ಮಾವ ಹಣವನ್ನು ಕಟ್ಟಿಲ್ಲ ಎಂದು ರಮೇಶ್ ಎನ್ನುವವರು ಮೋಸದಿಂದ ನನ್ನ ಮಾವನ ಹೆಸರನ್ನು ಕಡಿತಗೊಳಿಸಿ ತನ್ನ ಸ್ವಂತ ಹೆಸರಿನಲ್ಲಿ ಪರವಾನಗಿಯನ್ನು ಮುಂದುವರೆಸಿಕೊಂಡು ಹೋದರು.

**4.** ನಿಪಿ–1 ರಂತೆ ನನ್ನ ಮಾವ ಓಬೇ ಗೌಡರವರು ಮೃತ ಪಟ್ಟ ನಂತರ 1991 ನೇ ಸಾಲಿನಲ್ಲಿ 1 ನೇ ಪ್ರತಿವಾದಿ ಮದ್ಯದ ಅಂಗಡಿಯ ಪರವಾನಗಿಯನ್ನು ನವೀಕರಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ–1

ರ ಪ್ರಕಾರ ಮಾರುತಿ ವೈನ್ಸ್ ಸ್ಟೋರ್ ಎಂಬ ಹೆಸರಿನಲ್ಲಿ ಮದ್ಯದ ಅಂಗಡಿಯನ್ನು ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 2 ರ ಆಸ್ತಿಯನ್ನು ನನ್ನ ಗಂಡ ಖರೀದಿ ಮಾಡಿದ ಬಗ್ಗೆ ಮೂಲ ದಾಖಲೆಗಳನ್ನು ವಾದಿಯಿಂದ ಪಡೆದುಕೊಂಡಿದ್ದೇವೆ. ನಿಪಿ–6 ಅನ್ನು ನೋಟಿಫೈಡ್ ಏರಿಯಾ ಕಮಿಟಿ, ಕಾರ್ಗಲ್ ರವರು 1 ನೇ ವಾದಿಗೆ ಕೊಟ್ಟಿರುವ ಮೂಲ ದಾಖಲೆ ಎಂದರೆ ಸರಿ. ದಾವಾ ಐಟಂ ನಂಬರ್ 2 ರ ಆಸ್ತಿಯನ್ನು ವಾದಿಯು ಖರೀದಿ ಮಾಡಿದಾಗ ಪ್ರತಿಫಲವನ್ನು 1 ನೇ ವಾದಿಯ ಗಂಡನ ಮನೆಯ ಮನೆತನದಿಂದ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಮತ್ತು 1 ನೇ ವಾದಿ ಮದುವೆಯಾಗಿ ಬಂದ ನಂತರ ಯಾವತ್ತೂ ಸಹ ಮದ್ಯದ ಅಂಗಡಿಗೆ ಹೋಗಿ ವ್ಯಾಪಾರ ಮಾಡಿಲ್ಲ.

**5.** ವಾದಿಯು ನನ್ನಷ್ಟು ಬುದ್ಧಿವಂತಳಲ್ಲ ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ನನ್ನ ಮದುವೆಯಾದ ಕಾಲಕ್ಕೆ ವಾದಿಯು ಪ್ರತ್ಯೇಕವಾಗಿ ವಾಸವಾಗಿದ್ದು, 3 ತಿಂಗಳಲ್ಲೇ ವಾದಿಯು ಗಂಡ ಮೃತ ಪಟ್ಟಿದ್ದರಿಂದ ಅವಳು ತವರು ಮನೆಗೆ ಶಾಶ್ವತವಾಗಿ ನೆಲೆಸಿದ್ದರಿಂದ ವಾದಿಯ ಕುರಿತು ನಾನು ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಲು ಆಗಲಿಲ್ಲ.

**6.** ವಾದಿಗೆ ಒಬ್ಬನೇ ಮಗನಿದ್ದು, ಅವನು ಹುಟ್ಟು ದಡ್ಡ ಎಂದರೆ ಸರಿ. ಮದ್ಯದ ವ್ಯವಹಾರಕ್ಕೆ ಹೆಚ್ಚಿನ ಬಂಡವಾಳ ಬೇಕಾಗುತ್ತದೆ ಎಂದರೆ ಸರಿ. ಸ್ವಂತ ಆಸ್ತಿಗಳು ಇದ್ದರೆ, ಅವುಗಳನ್ನು ಬ್ಯಾಂಕಿಗೆ ಆಧಾರ ಮಾಡಿ ಹಣ ಪಡೆದು ಅದರಿಂದ ಮದ್ಯದ ಅಂಗಡಿಯನ್ನು ನಡೆಸಬಹುದು ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿಯ ಹೆಸರಿಗೆ ಖರೀದಿ ಮಾಡಿದ ಬಗ್ಗೆ ನನಗಿಂತ ಹೆಚ್ಚಾಗಿ 1 ನೇ ಪ್ರತಿವಾದಿಗೆ ತಿಳಿದಿದೆ ಎಂದರೆ ಸರಿ. ದಾವಾ ಐಟಂ ನಂಬರ್ 2 ರ ಆಸ್ತಿಯನ್ನು ಖರೀದಿಸಲು ಹಣವನ್ನು ಹೇಗೆ ಹೊಂದಿಸಿದರು ಎಂದು 1 ನೇ ಪ್ರತಿವಾದಿಗೆ ಚೆನ್ನಾಗಿ ತಿಳಿದಿದೆ. 1 ನೇ ಪ್ರತಿವಾದಿಯು ಕೋರ್ಟಿಗೆ ಬಂದರೆ ವಾಸ್ತವಾಂಶ ತಿಳಿಯುತ್ತದೆ ಎಂದು ಅವರನ್ನು ನಾನು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಿಲ್ಲ ಎನ್ನುವುದು ಸರಿಯಲ್ಲ. 1 ನೇ ವಾದಿಯ ಗಂಡ ಮೃತ ಪಟ್ಟ ಸಂದರ್ಭದಲ್ಲಿ ವಾದಿಯನ್ನು ಖಾತೆ ಬದಲಾವಣೆ ಮಾಡಬೇಕೆಂದು ಕರೆದುಕೊಂಡು ಹೋಗಿ ಮೋಸದಿಂದ ದಾವಾ ಐಟಂ ನಂಬರ್ 2 ರ ಕುರಿತು ಕ್ರಯ ಪತ್ರವನ್ನು ಬರೆಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 2 ರ ಕ್ರಯದ ಕಾಲಕ್ಕೆ ನಾವು 1 ನೇ ವಾದಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಸದರಿ ಕ್ರಯ ಪತ್ರದ ನೊಂದಣಿ ಶುಲ್ಕವನ್ನು ಸಹ ಓಬೇ ಗೌಡರವರ ಕುಟುಂಬದ ಹಣದಿಂದಲೇ ಪಾವತಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಓಬೇ ಗೌಡರ ದುಡುಮೆಯಿಂದ ಗಳಿಸಿದ ಸ್ವತ್ತುಗಳು ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.